ಬೆಲೆ ರೂ.2.50
D.O.P - 15th of every month at Udupi Sorting Office

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ಡೌನ್‌ಲೋಡ್ ಮಾಡಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

# ಶ್ರೀ ಶಾರದಾ

ಮಾಸಪತ್ರಿಕೆ – 15 ಡಿಸೆಂಬರ್ 2020

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-20 ಸಂಚಿಕೆ-12 ಪುಟಗಳು-6 Registered Under No.UDP/1260/2018-2020 Licenced to Post without Prepayment Licence No. SK/WPP/UDP/81/2018-20

## ಶ್ರೀ ಶಾರದಾ ಮಂಟಪದಲ್ಲಿ ದೀಪಾವಳಿ ಆಚರಣೆ





ಶ್ರೀ ಶಾರದಾ ಮಂಟಪದಲ್ಲಿ ಕಳೆದ ವರ್ಷದಿಂದ ದೀಪಾವಳಿಯನ್ನು ಸಡಗರದಿಂದ ಆಚರಿಸುವ ಕ್ರಮ ಆರಂಭಿಸಲಾಗಿತ್ತು. ಆದರೆ ಈ ವರ್ಷ ಕೊರೋನಾ ನಿಮಿತ್ತ ದೀಪಾವಳಿಯನ್ನು ಆಚರಿಸಲಾಗುವುದೋ ಇಲ್ಲವೋ ಎಂಬ ಆತಂಕ ಇತ್ತು. ಆದರೆ ಕೊರೋನಾದ ಭೀತಿಯು ಕಡಿಮೆಯಾದಂತೆ ದೀಪಾವಳಿಯನ್ನು ಆಚರಿಸುವ ಹುಮ್ಮಸ್ಸು ಹೆಚ್ಚಿತು. ಅಂತೆಯೇ ಈ ವರ್ಷ ವಿಶೇಷವಾಗಿ ದೀಪಾವಳಿ ಹಾಗೂ ಗೋಪೂಜೆಯನ್ನು ಸಹ ನಡೆಸಲಾಯಿತು.

ತಾರೀಕು 15.11.2020ರಂದು ಬೆಳಿಗ್ಗೆ ಪುಣ್ಯಕೋಟಿ ಗೋಸೇವಾ ಟ್ರಸ್ಟ್‌ನ ಸಹಯೋಗದಲ್ಲಿ ಉಡುಪಿಯ ಶ್ರೀ ಶಾರದಾ ಮಂಟಪದ ವಠಾರದಲ್ಲಿ ಗೋಪೂಜೆಯನ್ನು ನೆರವೇರಿಸಲಾಯಿತು. ಅಂದು ಅತಿಥಿಗಳಾಗಿ ರಾಷ್ಟ್ರೀಯ ಮಹಿಳಾ ಆಯೋಗದ ಸದಸ್ಯರಾದ ಶ್ರೀಮತಿ ಶ್ಯಾಮಲಾ ಕುಂದರ್ ಹಾಗೂ ಉಡುಪಿ ನಗರಸಭಾ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ರಾಘವೇಂದ್ರ ಕಿಣಿ ಆಗಮಿಸಿದ್ದರು. ಶ್ರೀ ಜಿ.ಕೆ. ಕೋಲ್ಪೆ ಇವರ ಅಧ್ವರ್ಯತನದಲ್ಲಿ ಗೋಪೂಜೆಯನ್ನು ನೆರವೇರಿಸಲಾಯಿತು.

ಅತಿಥಿಗಳು ಗೋಪೂಜೆಯ ಮಹತ್ವದ ಬಗ್ಗೆ ವಿವರಿಸಿ ಹೇಳಿದರು. ಉಡುಪಿಯ ಗೋಪಾಲಕರಾದ ಅಜಿತ್ ರಾವ್ ಹಾಗೂ ಇತರರನ್ನು ಸನ್ಮಾನಿಸಲಾಯಿತು. ಸುಮಾರು 50 ಜನ ಸಮಾಜಬಾಂಧವರು ಹಾಜರಿದ್ದರು. ದೀಪಾವಳಿಗಾಗಿ ಸೆಲ್ಫಿ ಸ್ಪರ್ಧೆ ಹಾಗೂ ದೀಪಾವಳಿ ಫೋಟೋ ಸ್ಪರ್ಧೆ ಏರ್ಪಡಿಸಲಾಗಿತ್ತು. ತಾರೀಕು 21.11.2020 ರಂದು ಸಂಜೆ ದೀಪಾವಳಿಯನ್ನು ಆಚರಿಸಲಾಯಿತು. ಆ ಸಂಜೆ ನಮ್ಮ ಸಮಾಜದ ಮಹಿಳೆಯರು, ಯುವಕರು ಹಾಗೂ ಯುವತಿಯರು ಸೇರಿ ದೇವಸ್ಥಾನದ ಮುಂದೆ ದೊಡ್ಡ ದೀಪಗಳ ರಂಗೋಲಿಯನ್ನು ರಚಿಸಿದರು. ನಂತರ ನಡೆದ ಸಭೆಯಲ್ಲಿ ಶ್ರೀ ಎಂ. ಅನಂತಕೃಷ್ಣ ರಾವ್, ಶ್ರೀ ಆನಂದ ರಾವ್ ಹಾಗೂ ಲಕ್ಷ್ಮೀ ದಂಪತಿಗಳು ಮತ್ತು ಶ್ರೀ ಬೈಲಕೆರೆ ನಾರಾಯಣ ಇವರ ಭಾವಚಿತ್ರಗಳನ್ನು ಅನಾವರಣ ಮಾಡಲಾಯಿತು. ಶ್ರೀ ಗಣೇಶ್ ರಾವ್ ಬಂಡಿ, ಶ್ರೀ ಅಶೋಕ್ ರಾವ್ ಕಟಪಾಡಿ, ಶ್ರೀ ಉಮೇಶ್ ರಾವ್ ಕುಡಾಲ್ ಹಾಗೂ ಶ್ರೀ ಬೈಲಕೆರೆ ಜನಾರ್ದನ ರಾವ್ ಅತಿಥಿಗಳಾಗಿ ಆಗಮಿಸಿದ್ದರು. ನಂತರ ದೀಪಾವಳಿ ಫೋಟೋ ಸ್ಪರ್ಧೆ ಹಾಗೂ ಸೆಲ್ಫಿ ಸ್ಪರ್ಧೆ ವಿಜೇತರನ್ನು ಘೋಷಿಸಿ ಅವರಿಗೆ ಬಹುಮಾನ ವಿತರಿಸಲಾಯಿತು. ಆನಂತರ ದೀಪಾವಳಿ ಹಬ್ಬದ ದಾಂಡಿಯಾ ನೃತ್ಯ ಹಾಗೂ ವಿಶೇಷ ಭೋಜನ ನಡೆಯಿತು. ಸುಮಾರು 250 ಕ್ಕೂ ಹೆಚ್ಚು ಜನ ಆಗಮಿಸಿ ಸಂತೋಷಪಟ್ಟರು.

## ಕಡಿಯಾಳಿ ದೇವಸ್ಥಾನದ ಮೊಕ್ತೇಸರರಾಗಿ ಮಂಜುನಾಥ ಹೆಬ್ಬಾರ್ ಆಯ್ಕೆ



ಉಡುಪಿ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದ ಅಧ್ಯಕ್ಷರೂ ಭಾರತೀಯ ಜನತಾ ಪಾರ್ಟಿಯಲ್ಲಿ ಸಕ್ರಿಯರೂ ಆಗಿರುವ ಶ್ರೀ ಮಂಜುನಾಥ ಹೆಬ್ಬಾರ್ ಇವರು ಉಡುಪಿ ಕಡಿಯಾಳಿಯ ಶ್ರೀ ಮಹಿಷಮರ್ದಿನಿ ದೇವಸ್ಥಾನದ ಆಡಳಿತ ಮಂಡಳಿಯ ಸದಸ್ಯರಾಗಿ ನೇಮಕವಾಗಿದ್ದಾರೆ. ಇವರು ಸಮಾಜಸೇವಾಕರ್ತರು. ಅವರ ಪತ್ನಿ ಶ್ರೀಮತಿ ರಜನಿ ಹೆಬ್ಬಾರ್ ಇವರು ಉಡುಪಿಯ ನಗರಸಭೆಯ ಕೌನ್ಸಿಲರ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರಿಗೆ ನಮ್ಮ ಸಂಘದ ಶುಭಹಾರೈಕೆಗಳು.

## ಉಡುಪಿ ಸ್ಥಾನಿಕ ಬ್ರಾಹ್ಮಣ ಸಂಘದ ವಾರ್ಷಿಕ ಮಹಾಸಭೆ



ತಾರೀಕು 06.12.2020ರಂದು ಉಡುಪಿಯ ಶ್ರೀ ಶಾರದಾ ದೇವಸ್ಥಾನದ ಜ್ಞಾನಮಂದಿರದಲ್ಲಿ ಅಪರಾಹ್ನ 3.30ಕ್ಕೆ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಉಡುಪಿ ಇದರ 2019-20ನೇ ಸಾಲಿನ ವಾರ್ಷಿಕ ಮಹಾಸಭೆ ನೆರವೇರಿತು. ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್ ಇವರು ಅಧ್ಯಕ್ಷತೆ ವಹಿಸಿದರು. ಕಾರ್ಯದರ್ಶಿಗಳಾದ ಶ್ರೀ ಯು. ಅರವಿಂದ ಕುಮಾರ್ ವರದಿ ವಾಚಿಸಿದರು. ಕೋಶಾಧಿಕಾರಿಗಳಾದ ಶ್ರೀ ಬಿ. ಜಯರಾಮ ರಾವ್ ಇವರು ಲೆಕ್ಕಪತ್ರ ಮಂಡಿಸಿದರು. ನಂತರ ಸಭಾಸದರ ಪ್ರಶ್ನೆಗಳಿಗೆ ಅಧ್ಯಕ್ಷರು ಉತ್ತರವನ್ನು ನೀಡಿದರು. ಮುಂದಿನ ವರ್ಷದ ಮುಂಗಡ ಪತ್ರವನ್ನು ಅಂಗೀಕರಿಸಲಾಯಿತು. ಹಾಗೂ ಧನ್ಯವಾದಗಳೊಂದಿಗೆ ಸಭೆ ಮುಕ್ತಾಯ ಕಂಡಿತು.



ತಂತ್ರಾಡಿ ವಿಶ್ವನಾಥ ಶಾನುಭೋಗ್
☎ 94487 24161
97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು



With Best Compliments from :
Dr. Sanath S. Rao
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST
Clinic : 0820-6529474
Mobile : 9886093199
drsanathrao@gmail.com
JALAJA SKIN CARE AND COSMETOLOGY CLINIC
Sai Harsha Square, Koladapete (Thenkapete), Old Post Office Road, Udupi - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.
Also available at Lalith Hospital (12-30 a.m. to 2-00 p.m.)

ಶುಭಾಶಯಗಳೊಂದಿಗೆ



ಡಾ। ವಿಜಯಾ ರಾವ್ ವೈ.ಬಿ
ಎಂ.ಬಿ.ಬಿ.ಎಸ್; ಡಿ.ಜಿ.ಒ.(ಡಿ.ಎನ್.ಬಿ)
ಹೆರಿಗೆ ಹಾಗೂ ಸ್ತ್ರೀರೋಗ ತಜ್ಞರು
ಗಾಂಧಿ ಆಸ್ಪತ್ರೆ ಹಾಗೂ ಸುನಾಗ್ ಆಸ್ಪತ್ರೆ ಉಡುಪಿಯಲ್ಲಿ ಸಂದರ್ಶನಕ್ಕಾಗಿ ಲಭ್ಯ
ಫೋನ್ : 9448164327

# ಸುಸ್ವಾಗತಂ ಸುಬ್ರಹ್ಮಣ್ಯ

ಲೇಖನ : ವೈ.ಮೋಹನ ರಾವ್
ಅಂಚೆಚೀಟಿ ಸಂಗ್ರಹ : ಕೃಷ್ಣಯ್ಯ ಎಂ.ಕೆ.

**ಸದಾ ಬಾಲರೂಪಾಪಿ ವಿಘ್ನಾದ್ರಿ ಹಂತ್ರೀ**
**ಮಹಾದಂತಿ ವಕ್ತ್ರಾಪಿ ಪಂಚಾಸ್ಯ ಮಾನ್ಯಾ।**
**ವಿಧೀಂದ್ರಾದಿ ಮೃಗ್ಯಾ ಗಣೇಶಾಭಿ ಧಾಮೇ**
**ವಿಧತ್ತಾಂ ಶ್ರೀಯಂ ಕಾಪಿ ಕಲ್ಯಾಣಮೂರ್ತಿಃ ।೧।**

ಸದಾ ಬಾಲರೂಪಿಯಾಗಿದ್ದರೂ, ವಿಘ್ನಗಳೆಂಬ ಪರ್ವತಗಳನ್ನು ನಾಶಗೊಳಿಸುವ ಸಾಮರ್ಥ್ಯ ಉಳ್ಳವನೂ, ಮದ್ದಾನೆಯ ಮುಖವುಳ್ಳವನಾಗಿದ್ದರೂ, ಮೃಗೇಂದ್ರನಿಂದ ಮಾನ್ಯತೆ ಪಡೆದ ಅಥವಾ ಪರಮೇಶ್ವರನಿಂದ ಮಾನ್ಯತೆಯುಳ್ಳ ಬ್ರಹ್ಮೇಂದ್ರಾದಿಗಳಿಂದ ಅರಸಿ, ಆದರಿಸಲ್ಪಡುವ ಕಲ್ಯಾಣಮೂರ್ತಿಯಾದ ಗಣೇಶನು ನನಗೆ ಸಕಲ ಸಂಪದವನ್ನು ಕರುಣಿಸಲಿ.

**ನ ಜಾನಾಮಿ ಶಬ್ದಂ ನ ಜಾನಾಮಿ ಚಾರ್ಥಂ**
**ನ ಜಾನಾಮಿ ಪದ್ಯಂ ನ ಜಾನಾಮಿ ಗದ್ಯಂ ।**
**ಚಿದೇಕಾ ಷಡಸ್ಯಾಹೃದಿ ದ್ಯೋತತೇ ಮೇ**
**ಮುಖಾನ್ನಿಃ ಸರಂತೇ ಗಿರಶ್ಚಾಪಿ ಚಿತ್ರಮ್ ।೨।**

ನಾನು ಶಬ್ದಗಳನ್ನೂ ತಿಳಿದಿಲ್ಲ, ನನಗೆ ಗದ್ಯವೂ ತಿಳಿಯದು, ಅರ್ಥವೂ ತಿಳಿಯದು. ಆದರೆ ಹೃದಯದಲ್ಲಿ ಸುಬ್ರಹ್ಮಣ್ಯನ ಸ್ವರೂಪವು ಯಾವಾಗಲೂ ಬೆಳಗುತ್ತಿದೆ. ಆದಕಾರಣ ನನ್ನ ಮುಖದಿಂದ ಚಿತ್ರವಿಚಿತ್ರವಾದ ವಾಣಿಯು ಹೊರಹೊಮ್ಮುತ್ತಿದೆ.

**ಮಯೂರಾಧಿರೂಢಂ ಮಹಾವಾಕ್ಯಗೂಢಂ**
**ಮನೋಹಾರಿ ದೇಹಂ ಮಹಾಚಿತ್ತ ಗೇಹಂ।**
**ಮಹಿದೇವ ದೇವಂ ಮಹಾವೇದ ಭಾವಂ**
**ಮಹಾದೇವ ಬಾಲಂ ಭಜೇ ಲೋಕಪಾಲಂ॥೩॥**

ನವಿಲಿನ ಮೇಲೆ ಕುಳಿತಿರುವ, ವೇದ ಉಪನಿಷತ್ ವಾಕ್ಯಗಳಲ್ಲಿ ಪ್ರಕಟವಾಗುವ, ಮನೋಹರವಾದ ದೇಹ ಧರಿಸಿರುವ, ಮಹಾತ್ಮರ ಮನದಲ್ಲಿ ಮನೆ ಮಾಡಿರುವ, ದೇವದೇವನಾದ ಜ್ಞಾನನಿಧಿಯಾಗಿರುವ, ಲೋಕರಕ್ಷಕನಾದ, ಮಹಾದೇವನ ಪುತ್ರನಾದ ಸುಬ್ರಹ್ಮಣ್ಯನನ್ನು ಭಜಿಸುತ್ತೇನೆ.

**ಪುಲಿಂದೇಶ ಕನ್ಯಾ ಘನಾಭೋಗ ತುಂಗ**
**ಸ್ತನಾಲಿಂಗನಾಸಕ್ತ ಕಾಶ್ಮೀರ ರಾಗಮ್ ।**
**ನಮಸ್ಯಾಮ್ಯಹಂ ತಾರಕಾರೇ ತವೋರ:**
**ಸ್ವಭಕ್ತಾವನೇ ಸರ್ವದಾ ಸಾನುರಾಗಮ್॥೧೧॥**

ಹೇ ತಾರಕಾಸುರ ಸಂಹಾರಿಯಾದ ಸುಬ್ರಹ್ಮಣ್ಯನೇ! ಪುಲಿಂದ ರಾಜಕುಮಾರಿ ವಲ್ಲೀದೇವಿಯ ದಿವ್ಯಾಲಿಂಗನದ ಸಂದರ್ಭದಲ್ಲಿ ಕುಂಕುಮ ಕೇಸರಿಗಳಿಂದ ಅಲಂಕೃತವಾಗಿದ್ದು ಭಕ್ತರ ರಕ್ಷಣೆಯಲ್ಲಿ ಯಾವಾಗಲೂ ಅನುರಾಗವನ್ನು ಹೊಂದಿರುವುದನ್ನು ಸೂಚಿಸುತ್ತಿರುವ ವಕ್ಷಸ್ಥಳವನ್ನು ವಂದಿಸುವೆನು.

**ಅಪಸ್ಮಾರ ಕುಷ್ಠ ಕ್ಷಯಾರ್ಶಃ ಪ್ರಮೇಹ**
**ಜ್ವರೋನ್ಮಾದ ಗುಲ್ಮಾದಿ ರೋಗ ಮಹಾಂತಃ।**
**ಪಿಶಾಚಾಶ್ಚ ಸರ್ವೇಭವತ್ಪತ್ರಭೂತಿಂ**
**ವಿಲೋಕ್ಯಕ್ಷಣತ್ತಾರಕಾರೇ ದ್ರವಂತೇ ॥೨೫॥**

ಹೇ ತಾರಕಾರಿಯಾದ ಸುಬ್ರಹ್ಮಣ್ಯನೇ! ಅಪಸ್ಮಾರ, ಕುಷ್ಠ, ಕ್ಷಯ, ಮೂಲವ್ಯಾಧಿ, ಪ್ರಮೇಹ, ಜ್ವರ, ಉನ್ಮಾದ, ಗುಲ್ಮ ಮೊದಲಾದ ಮಹಾರೋಗಗಳು ಮತ್ತು ಎಲ್ಲಾ ರೀತಿಯ ಪಿಶಾಚಿಗಳು ಕೂಡಾ ನಿನ್ನದಾದ ಪ್ರಸಾದ ರೂಪದ ವಿಭೂತಿಯನ್ನು ನೋಡುತ್ತಲೇ ದ್ರವಿಸಿ ನಾಶ ಹೊಂದುತ್ತವೆ.

> ಜಗದ್ಗುರು ಶ್ರೀ ಶಂಕರ ಭಗವತ್ಪೂಜ್ಯ ಪಾದಾಚಾರ್ಯಕೃತ 'ಶ್ರೀ ಸುಬ್ರಹ್ಮಣ್ಯ ಭುಜಂಗಮ್'ನಲ್ಲಿ 33 ಸ್ತೋತ್ರಗಳು ಇವೆ. 4 ಸ್ತೋತ್ರಗಳನ್ನು ಇಲ್ಲಿ ನೀಡಲಾಗಿದೆ. ಈ ಸ್ತೋತ್ರಗಳನ್ನು ಅವುಗಳ ಸರಳ ಕನ್ನಡ ಅನುವಾದದೊಂದಿಗೆ 1999ರಲ್ಲಿ ವೇದಮೂರ್ತಿ ಯಚ್.ನಾರಾಯಣ ಭಟ್ ಸ್ಮಾರಕ ಟ್ರಸ್ಟ್ (ರಿ.) ಹಳೆಯಂಗಡಿ ಇವರು ಪ್ರಕಟಿಸಿರುವರು. ಈ ಪುಸ್ತಕವನ್ನು ಅಚ್ಚು ಹಾಕಲು ತಗಲಿದ ಸಂಪೂರ್ಣ ಖರ್ಚನ್ನು ವಹಿಸಿಕೊಂಡವರು ದಿ। ಸೌ। ಅಮೃತವಲ್ಲಿ ಜ್ಞಾನೇಶ್ವರ್, ನಂದಿಕೂರು ಇವರ ಕುಟುಂಬದವರು. ಪ್ರಥಮ ಮುದ್ರಣದ 1,000 ಪ್ರತಿಗಳನ್ನು ದಿ.ವಿದ್ವಾನ್ ಮಾಂಟ್ರಾಡಿ ಗೋವಿಂದರಾಯರ ಮಕ್ಕಳು ಕ್ರಯಕ್ಕೆ ಪಡಕೊಂಡು ಇವುಗಳ ಮೌಲ್ಯವನ್ನು ಏಕಗಂಟಿನಲ್ಲಿ ಶ್ರೀ ಶೃಂಗೇರಿ ಜಗದ್ಗುರು ಪೀಠಕ್ಕೆ ಸಮರ್ಪಿಸಲು ಅನುವು ಮಾಡಿಕೊಟ್ಟಿರುವರು. ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ಅಡಿದಾವರೆಗಳಿಗೆ ಈ ಹೊತ್ತಿಗೆಯನ್ನು ಟ್ರಸ್ಟ್‌ನವರು ಅರ್ಪಿಸಿರುತ್ತಾರೆ.

**ಯಕ್ಷಗಾನ ಹಾಡೊಂದು ಹೀಗಿದೆ :**

**ಶ್ರೀ ಸುಬ್ರಹ್ಮಣ್ಯ ಸ್ತುತಿ**

**ಭಾಮಿನಿ–ರಾಗ–ಮಧ್ಯಮಾವತಿ**

***ತಾರಕನ ಕೊಲಲೆಂದು ಶಿವನ ಕುಮಾರ ಪಾರ್ವತಿಯಲ್ಲಿ ಜನಿಸಿದ। ಮೂರು ಲೋಕದ ಒಡೆಯ ಸುಬ್ರಹ್ಮಣ್ಯ ಸಲಹೆನ್ನ ॥ ಆರು ಮತ್ತೊಂದನೆಯ ದಿನದಲಿ ಘೋರ ದೈತ್ಯನ ಶಿರವನರಿದ। ಮಯೂರವಾಹನ ಕೊಡು ನಮಗೆ ಇಷ್ಟಾರ್ಥ ಸಂಪದವ ॥***

ಇನ್ನೊಂದು ಸುಬ್ರಹ್ಮಣ್ಯ ಸ್ತುತಿಯನ್ನು ನನಗೆ ಬ್ರಹ್ಮಾವರದಲ್ಲಿ ಸಂತರೊಬ್ಬರು ನೀಡಿದ್ದರು. ದಿನಾ ಅದನ್ನು ಪಠಿಸಬೇಕೆಂದು ಹೇಳಿದ್ದರು. ಆ ಸುಬ್ರಹ್ಮಣ್ಯ ಸ್ತುತಿಯ ಮೊದಲ ಭಾಗವು ಹೀಗಿದೆ :


**ಓಂ ರೀಂ ಸಾಮ್ ರುದ್ರ ಕುಮಾರಾಯ ಅಷ್ಟಾಂಗ ಯೋಗ ನಾಯ ಕಾಯ.**

**ಮಹಾ ಮಣಿಬಿ ಅಲಂಕೃತಾಯ ಕ್ರೌಂಚಗಿರಿ ಮರ್ದನಾಯ ತಾರಾಕ ಸಂಹಾರ ಕಾರಣಾಯ ಶಕ್ತಿ ಶೂಲ ಗದಾ ಖಡ್ಗ, ಪಾಸಾಂಕುಶ, ಮುಸಲ, ಪ್ರಸಾದೇನೇಕ ಚಿತ್ರಾಯುದ, ಅಲಂಕೃತಾಯಾ, ದ್ವಾದಶ ಭುಜಾಯ, ಹಾರ ನಪೂರ ಕೇಯೂರ ಕನಕ ಕುಂಡಲ ಭೂಷಿತಾಯ ಸಕಲ ದೇವ ಸೇನ ಸಮೂಹಾಯ. ಪರಿವತ್ರಾಯ ಗಾಂಗೇ ಯಾಯ ಶರವಣ ಭವಾಯಾ ದೇವಲೋಕ ಶರಣ್ಯಾಯ, ಸರ್ವ ಲೋಕಾನ್ ಹನಹನ. ದುಷ್ಟಾನ್ ತ್ರಾಶಯ ತ್ರಾಶಯ.**

**ಗಣಪತಿ ಸೋದರಾಯ, ಭೂತ ಪ್ರೇತ ಪಿಶಾಚಾಕರ್ಷಣಾಯಾ, ಗಂಗಾ ಸಹಯಾಯ, ಓಂಕಾರ ಸ್ವರೂಪಾಯ, ರುದ್ರತೇಜ ಸ್ವರೂಪಿಣೆ, ವಿಶ್ವರೂಪಾಯ, ಮಹಾಶಾಂತಾಯತೇ ನಮಃ...**

ಸುಬ್ರಹ್ಮಣ್ಯ ಏಳನೇ ದಿನದಲ್ಲಿ ದೇವ ಸೇನಾಧಿಪತಿಯಾಗಿ ತಾರಾಕಾಸುರನ ವಧೆ ಮಾಡುತ್ತಾನೆ. ಕುಮಾರ, ಕುಮಾರಸ್ವಾಮಿ,



(ಕುಮಾರ ಅಂದರೆ ಬ್ರಹ್ಮಚಾರಿ, ಸ್ವಾಮಿ ಎಂದರೆ ದೇವರು) ಸ್ಕಂದ, ಷಣ್ಮುಖ, ಮುರುಗನ್ (ತರುಣ) ಇತ್ಯಾದಿ ಹೆಸರುಗಳಿಂದ ಸುಬ್ರಹ್ಮಣ್ಯ ಪ್ರಸಿದ್ಧನು. ಜ್ಞಾನ, ಶಕ್ತಿ, ಸಿದ್ಧಿ ಈ ಮೂರು ಸೇರಿ ಸುಬ್ರಹ್ಮಣ್ಯ. ತಾಯಿಯ ಮಡಿಲಲ್ಲಿ ಕುಳಿತು ಬ್ರಹ್ಮ, ಪ್ರಣವ, ಓಂಕಾರ ಕಲಿತನು. ತನ್ನ ಒಂದು ಅಂಶವನ್ನು ವಾಸುಕಿಯ ಪ್ರಾರ್ಥನೆಯ ಮೇರೆಗೆ ನೀಡಿದುದರಿಂದ ಅದು ಸುಬ್ರಹ್ಮಣ್ಯ ಷಷ್ಠಿ ಎಂದು ಕರೆಯಲ್ಪಡುತ್ತದೆ. ನಾಗಾರಾಧನೆ ಭಾರತೀಯ ಸಂಸ್ಕೃತಿಯಲ್ಲಿ ಅತಿ ಪುರಾತನ ಪೂಜಾ ವಿಧಾನವೂ ಹೌದು.

ನೀಲಿ ಬಣ್ಣದ ನವಿಲೇ ಸುಬ್ರಹ್ಮಣ್ಯನ ಪೀಠ ಅಥವಾ ವಾಹನ. ಉದ್ದನೆಯ ಈಟಿಯಂಥ ಆಯುಧವನ್ನು ಸುಬ್ರಹ್ಮಣ್ಯನ ಕೈಯಲ್ಲಿ ಕಾಣಬಹುದು. ಈಟಿಯಂಥ ಆಯುಧ ಪಾರ್ವತಿಯಿಂದ ಸುಬ್ರಹ್ಮಣ್ಯನಿಗೆ ನೀಡಲ್ಪಟ್ಟಿತು. ಅಸುರರನ್ನು ಕೊಲ್ಲಲು ಈ ಆಯುಧ.

ಸುಬ್ರಹ್ಮಣ್ಯ ನಮ್ಮ ಕುಲದೇವತೆ. ಮನೆಗಳಲ್ಲಿ ಮತ್ತು ದೇವಸ್ಥಾನಗಳಲ್ಲಿ ಸುಬ್ರಹ್ಮಣ್ಯ ಷಷ್ಠಿ ಆಚರಿಸಲ್ಪಡುತ್ತದೆ. ಬೆಳ್ತಂಗಡಿಯ ಕೊಕ್ರಾಡಿಯ ಸುಬ್ರಹ್ಮಣ್ಯ ದೇವಸ್ಥಾನ, ಸುಳ್ಯದ ಕಾಂತಮಂಗಲ ಸುಬ್ರಹ್ಮಣ್ಯ ದೇವಸ್ಥಾನ, ಪಾವಂಜೆಯ ಜ್ಞಾನಶಕ್ತಿ ದೇವಸ್ಥಾನ ಮತ್ತು ಬೆಂಗಳೂರಿನ ಕೋಡಿಗೆಹಳ್ಳಿ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನಗಳಲ್ಲಿ ಷಷ್ಠಿಯಂದು ವಿಶೇಷ ಉತ್ಸವ ವಿಜೃಂಭಣೆಯಿಂದ ಷಷ್ಠಿ ಆಚರಿಸಲ್ಪಡುತ್ತದೆ. ಶ್ರೀಕ್ಷೇತ್ರ ಸುಬ್ರಹ್ಮಣ್ಯ, ಉಡುಪಿಯ ಶ್ರೀಕೃಷ್ಣ ಮಠ, ಉಡುಪಿಯ ಸಗ್ರಿ, ಕಾಳಾವರ, ಕುಡುಪು, ಮುಚ್ಚಿಲಕೋಡು, ಅರಿತೋಡು, ಮಾಂಗೋಡು ಮೊದಲಾದ ದೇವಸ್ಥಾನಗಳಲ್ಲಿ ಬಹಳ ವಿಜೃಂಭಣೆಯಿಂದ ಷಷ್ಠಿ ಆಚರಿಸಲ್ಪಡುತ್ತದೆ.

ಮುರುಗನ್ ತಮಿಳರ ಆರಾಧ್ಯ ದೇವರು. ಅಲ್ಲಿ ಆರು ದಿನಗಳ ಉಪವಾಸ ಮತ್ತು ಪ್ರಾರ್ಥನೆ ನಡೆಯುತ್ತದೆ. ಸ್ಕಂದ ಷಷ್ಠಿ ಎಂದು ಬಹಳ ಪ್ರಸಿದ್ಧವಾಗಿದೆ. ಆ ದಿನದಲ್ಲೇ ಸ್ಕಂದನಿಗೆ ಈಟಿಯಂಥ ಆಯುಧವನ್ನು ಪಾರ್ವತಿದೇವಿ ನೀಡಿದ್ದು. ಅದು ಅವಳ ಶಕ್ತಿ ಮತ್ತು ಸಾಮರ್ಥ್ಯವನ್ನು ಪ್ರತಿನಿಧಿಸುತ್ತದೆ.

ಉತ್ತರಕೇರಳ, ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು ಇಲ್ಲಿ ಸುಬ್ರಹ್ಮಣ್ಯ ಮುಖ್ಯದೇವರು. ನಾಗಾರಾಧನೆಯಂತಹ ವೈಶಿಷ್ಟ್ಯವನ್ನು ಉತ್ತರ ಕನ್ನಡದಲ್ಲಿ ಕಾಣಬಹುದು.


ಮಲೇಷಿಯಾ, ಸಿಂಗಾಪುರ, ಶ್ರೀಲಂಕಾ, ಕೆನಡಾ ಮೊದಲಾದ ದೇಶಗಳಲ್ಲಿಯೂ ಸುಬ್ರಹ್ಮಣ್ಯ ಪೂಜಿಸ್ಪಲ್ಪಡುತ್ತಾನೆ. ಕೌಲಾಲಂಪುರದಲ್ಲಿರುವ 'ಬಟುಕೇವ್ಸ್' ದೇವ ಮುರುಗನ ಪ್ರಸಿದ್ಧವಾದ ದೇವಾಲಯ.

ಬಟುಕೇವ್ಸ್ ಕೌಲಾಲಂಪುರದ ಅತ್ಯಂತ ಮುಖ್ಯ ಪ್ರವಿತ್ರ ಸ್ಥಳಗಳಲ್ಲೊಂದು, ಇಲ್ಲಿ ಸ್ಕಂದನ ದೀರ್ಘವಾದ ಮೂರ್ತಿಯಿದೆ. ಬೆಟ್ಟ ಹತ್ತಿ ಹೋದರೆ ಷಣ್ಮುಖ ದೇವರ ದರ್ಶನ ಮಾಡಬಹುದು. ಸ್ಕಂದ ದೇವರ ಹತ್ತು ಬೆಟ್ಟಗಳಲ್ಲಿ ಆರು ಭಾರತದಲ್ಲಿವೆ. ನಾಲ್ಕು ಮಲಯನಾಡಿನಲ್ಲಿ ಇವೆ. ಇಪೊದಲ್ಲಿರುವ ಕಲ್ಲುಮಲ್ಲೈ, ಪೆನಾಂಗ್‌ನಲ್ಲಿರುವ ತಣ್ಣೀರ್ ಮಲ್ಲೈ, ಮಲೇಕಾದಲ್ಲಿರುವ ಸಣ್ಣಾಸಿ ಮಲ್ಲೈ ಮತ್ತು ಬಟುಕೇವ್ಸ್ ಇನ್ನುಳಿದ ನಾಲ್ಕು ಬೆಟ್ಟಗಳೆಂದು ಹೇಳಲಾಗುತ್ತದೆ.

ಭಕ್ತರ ಸಂಕಷ್ಟಗಳನ್ನು ಪರಿಹರಿಸುವವನಾದ, ಮಹಾರೋಗಗಳನ್ನು ನಿವಾರಿಸುವವನಾದ ಶ್ರೀ ಸುಬ್ರಹ್ಮಣ್ಯನು ನಮಗೆಲ್ಲರಿಗೂ ಒಳ್ಳೆಯದನ್ನು ಕರುಣಿಸುವಂತಾಗಲಿ.

## ಚಿಣ್ಣರ ಅಂಗಳ





ದಿವಿಜ್ ರಾವ್, 1ನೇ ತರಗತಿ, ಸುಲೋಚನಾದೇವಿ ಸಿಂಘಾನಿಯಾ ಸ್ಕೂಲ್, ಮುಂಬಯಿ

With Best Compliments From :




9845084866, 9880742159, 9886199769
1st Floor, New Milagres Mansion, Falnir Road, Mangalore - 575001
info@landtrades.in
sales@landtrades.in
Ph: 0824 2425424
www.landtrades.in
CRISIL DA3+ CREDAI

# ಉಡುಪಿಯಲ್ಲಿ ಸಂಘದ ವಿದ್ಯಾರ್ಥಿವೇತನ ವಿತರಣೆ

2020ನೇ ವರ್ಷವಿಡೀ ಎಲ್ಲ ಸಂಘ ಸಂಸ್ಥೆಗಳ ಪ್ರತಿಯೊಂದು ಚಟುವಟಿಕೆಗಳಿಗೂ ಕೋವಿಡ್-19ರ ಪರಿಣಾಮದಿಂದ ಕಡಿವಾಣ ಬಿದ್ದಿದೆ. ಅಂತೆಯೇ ಉಡುಪಿಯ ಸ್ಥಾನಿಕ ಬ್ರಾಹ್ಮಣ ಸಂಘ (ರಿ). ಕುಂಜಿಬೆಟ್ಟು. ವತಿಯಿಂದಲೂ ಪ್ರತಿವರ್ಷದ ಹತ್ತು ಹಲವು ಕಾರ್ಯಕ್ರಮಗಳು ಸ್ಥಗಿತಗೊಂಡಿತು. ಇನ್ನು ಹಲವು ಕಾರ್ಯಕ್ರಮಗಳು ವಿರಳ ಜನ ಸೇರುವಿಕೆಯಿಂದ ನಡೆದಿತ್ತು. ಪ್ರತಿವರ್ಷ ನಮ್ಮ ಸಮಾಜದ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ವಿತರಿಸುವುದೂ ಈ ಕಾರ್ಯಗಳಲ್ಲಿ ಒಂದಾಗಿದೆ. ವಿಜಯ ದಶಮಿಗೆ ಸರಿಯಾಗಿ ಈ ವಿತರಣಾ ಕಾರ್ಯವು ಹಿಂದಿನಿಂದಲೂ ನಡೆದುಕೊಂಡು ಬಂದ ಸಂಪ್ರದಾಯ. ಕೋರೋನಾ ಕಾರಣದಿಂದ ಶಾಲಾ ಕಾಲೇಜುಗಳ ಪುನರಾರಂಭ, ವಿದ್ಯಾರ್ಥಿಗಳ ಕಾಲೇಜು ಸೇರ್ಪಡೆ ಮೊದಲಾದ ಪ್ರಕ್ರಿಯೆಗಳು ವಿಳಂಬವಾದ ದೆಸೆಯಿಂದ ಸಂಘವೂ ಅದಕ್ಕೆ ಪೂರಕವಾಗಿ ಸ್ಪಂದಿಸಿ ಈಗಾಗಲೇ ಕೊಟ್ಟಿರುವ ಕೊನೆಯ ದಿನಾಂಕವನ್ನು ಪರಿಗಣಿಸದೆ ಇದುವರೆಗೆ ಬಂದ ಅರ್ಜಿಗಳೆಲ್ಲವನ್ನೂ ಪರಿಶೀಲಿಸಿ ಇದೀಗ ವಿದ್ಯಾರ್ಥಿವೇತನವನ್ನು ಆಯಾಯ ಬ್ಯಾಂಕ್ ಖಾತೆಗಳಿಗೆ ರವಾನಿಸಲಾಗುತಿದೆ.

ಈ ವರ್ಷ ಬೇರೆ ಬೇರೆ ತರಗತಿಯಲ್ಲಿ ಓದುತ್ತಿರುವ ಒಟ್ಟು 164 ಅರ್ಜಿ ಬಂದಿದ್ದು, ಸ್ಥಾನಿಕ ಸಮಾಜದವರಲ್ಲದವರೂ ಈ ವಿದ್ಯಾರ್ಥಿವೇತನಕ್ಕೆ ಅರ್ಜಿಸಲ್ಲಿಸಿದ್ದಾರೆ. ಅರ್ಜಿಯಲ್ಲಿ ನಮೂದಿಸಿರುವರಿತೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನೂ ಕ್ರಮಬದ್ಧವಾಗಿ ಕೊಟ್ಟಲ್ಲಿ ವಿದ್ಯಾರ್ಥಿವೇತನ ಮಂಜೂರು ಮಾಡಲು ಅನುಕೂಲವಾಗುತ್ತಿತು. ತಮ್ಮ ಊರಿನಲ್ಲಿರುವ ಸ್ಥಾನಿಕ ಸಂಘಟನೆಗಳ ಗಣ್ಯರ ಶಿಫಾರಸು ಇದ್ದಲ್ಲಿ ಅದನ್ನು ನಾವು ಪರಿಗಣಿಸಬಹುದು. ಇಲ್ಲವೇ ಜಾತಿ ಪ್ರಮಾಣ ಪತ್ರವನ್ನಾದರೂ ಲಗತ್ತಿಸಬೇಕಿತು. ಇದಲ್ಲದೆ ಶಾಲಾ ಕಾಲೇಜು ಸೇರ್ಪಡೆಯಾದ ಬಗ್ಗೆ ವ್ಯಾಸಂಗ ಪ್ರಮಾಣ ಪತ್ರವೂ ಬಹಳ ಪ್ರಾಮುಖ್ಯ. ಈ ಎಲ್ಲ ದಾಖಲೆಗಳಲ್ಲಿ ಯಾವುದೇ ಒಂದು ಇಲ್ಲದಿದ್ದರೂ ವಿದ್ಯಾರ್ಥಿವೇತನ ವೇದಿಕೆಯಿಂದ ಸಂಬಂಧಪಟ್ಟ ವಿದ್ಯಾರ್ಥಿಗೆ ದೂರವಾಣಿ ಕರೆ ಮಾಡಿ ಸವಿವರ ಪಡೆದುಕೊಳ್ಳಬೇಕಾಗುತ್ತದೆ. ಹೀಗೆ ವಿಚಾರಿಸುವಾಗ ಹಲವರಿಗೆ ಬೇಸರವಾಗಿರಲೂಬಹುದು. ಆದರೂ ಈ ವಿದ್ಯಾರ್ಥಿವೇತನವು ನಮ್ಮ ಸಮಾಜಕ್ಕೇ ಸೀಮಿತವಾಗಿರಬೇಕು, ಅರ್ಹರಾದವರಿಗೇ ಸಿಗಬೇಕು ಎನ್ನುವುದು ಸಂಘದ ಕಾಳಜಿ. ವಿದ್ಯಾರ್ಥಿವೇತನಕ್ಕೆ ಅರ್ಹ ವಿದ್ಯಾರ್ಥಿಗಳ ಹೆತ್ತವರ ಆದಾಯವನ್ನೂ ಪರಿಗಣಿಸಬೇಕು ತಾನೇ? ಆದಾಯ ಮಿತಿಗಿಂತ ಹೆಚ್ಚು ಇದ್ದವರೂ, ಈ ವಿದ್ಯಾರ್ಥಿವೇತನ ನಿಧಿಗೆ ದೇಣಿಗೆ ನೀಡಲು ಶಕ್ತರಾದವರೂ ವಿದ್ಯಾರ್ಥಿವೇತನಕ್ಕೆ ಅರ್ಜಿಸಲ್ಲಿಸಿರುವುದೂ ಕಂಡುಬರುತ್ತದೆ. ಮುಂದಿನ ದಿನಗಳಲ್ಲಿ ಸಮಾಜ ಬಾಂಧವರು ಈ ಬಗ್ಗೆ ಸರಿಯಾದ ಮಾಹಿತಿಯನ್ನು ಪಡೆದುಕೊಂಡೇ ಅರ್ಜಿ ಸಲ್ಲಿಸಬೇಕೆಂದು ಸಂಘ ಬಯಸುತ್ತದೆ.

**ಈ ವರ್ಷದ ವಿತರಣೆ**: ಈ ವರ್ಷ ಪಿಯುಸಿಯ ವಿದ್ಯಾರ್ಥಿಗಳಿಗೆ ರೂ.1500/-ರಂತೆ, ಪದವಿ ವಿದ್ಯಾರ್ಥಿಗಳಿಗೆ ತಲಾ ರೂ.2000/-ರಂತೆ, ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ತಲಾ ರೂ.2500/-ರರೆತೆ, ಇಂಜಿನಿಯರಿಂಗ್ ಮತ್ತು ವೈದ್ಯಕೀಯ ವಿದ್ಯಾರ್ಥಿಗಳಿಗೆ ತಲಾ ರೂ.3000/-ದಂತೆ ವಿದ್ಯಾರ್ಥಿವೇತನವನ್ನು ವಿತರಿಸಬೇಕೆಂದು ಸಂಘದ ಆಡಳಿತ ಮಂಡಳಿಯು ತೀರ್ಮಾನಿಸಿದೆ. ಹಾಗೆಯೇ ವೃತ್ತಿಪರ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಬಿಎಡ್, ಡಿಪ್ಲೊಮಾ ತರಗತಿಯ ಅರ್ಜಿಗಳನ್ನೂ ಪರಿಶೀಲಿಸಿ ತತ್ಸಮಾನ ವಿದ್ಯಾರ್ಥಿವೇತನವನ್ನು ಮಂಜೂರು ಮಾಡಲಾಗಿದೆ. ಒಟ್ಟಿನಲ್ಲಿ 2020ನೇ ಸಾಲಿನಲ್ಲಿ ಈವರೆಗೆ ಬಂದಿರುವ ಅರ್ಜಿಗಳಿಗೆ ಒಟ್ಟು ರೂ.344500/- ವಿದ್ಯಾರ್ಥಿವೇತನ ವಿತರಿಸಲಾಗಿದೆ. ಈ ವಿದ್ಯಾರ್ಥಿವೇತನದ ಅರ್ಜಿಗಳನ್ನು ಪರಿಶೀಲಿಸಿದ ವಿದ್ಯಾರ್ಥಿವೇತನ ವೇದಿಕೆಯ ಎಲ್ಲ ಸದಸ್ಯರು, ಸಂಘದ ಕಾರ್ಯದರ್ಶಿ ಶ್ರೀ ಅರವಿಂದ ಕುಮಾರ್, ಜತೆಕಾರ್ಯದರ್ಶಿಗಳಾದ ಶ್ರೀ ಪ್ರಭಾಕರಭಂಡಿ ಮತ್ತು ಶ್ರೀ ಐ.ಕೆ. ಜಯಚಂದ್ರ ರಾವ್, ಕೋಶಾಧಿಕಾರಿ ಶ್ರೀ ಜಯರಾಮ ರಾವ್, ಮತ್ತು ಅಧ್ಯಕ್ಷ ಶ್ರೀ ಮಂಜುನಾಥ ಹೆಬ್ಬಾರ್ ವೆಲ್ಲರಿಗೂ ವಿದ್ಯಾರ್ಥಿವೇತನ ವೇದಿಕೆಯ ವತಿಯಿಂದ ವಂದನೆಗಳನ್ನು ಅರ್ಪಿಸುತ್ತೇವೆ. ಕೊನೆಯದಾಗಿ ಸಂಘದ ಈ ವಿದ್ಯಾರ್ಥಿವೇತನ ನಿಧಿಯು ಇನ್ನೂ ಬೆಳೆಯುವಂತಾಗಬೇಕು, ಸಮಾಜ ಬಾಂಧವರು ಹಾಗೂ ಈ ವಿದ್ಯಾರ್ಥಿವೇತನದ ಸವಲತ್ತು ಪಡೆದು ಓದಿರುವ ನಮ್ಮ ಸಮಾಜದ ಗಣ್ಯ ದಾನಿಗಳು ತಮ್ಮ ಕೈಲಾದ ದೇಣಿಗೆಯನ್ನು ನೀಡಿ ಮುಂದಿನ ವಿದ್ಯಾರ್ಥಿಗಳ ಏಳಿಗೆಗೆ ಕಾರಣರಾಗಬೇಕೆಂದು ವಿನಂತಿಸುತ್ತೇವೆ.

**ವಿದ್ಯಾರ್ಥಿವೇತನ ವೇದಿಕೆಯ ಪರವಾಗಿ**
**-ಕೃಷ್ಣಕುಮಾರ್ ರಾವ್, ಮಟ್ಟು.**

## ನಿಧನ

### ಶ್ರೀ ಆನಂದರಾವ್



ಮೈಸೂರು ಸಂಘದ ಅಧ್ಯಕ್ಷರಾದ ಶ್ರೀ ಆನಂದರಾವ್ ಇವರು ತಾ.11.11.2020 ರಂದು ನಿಧನ ಹೊಂದಿದರು.

### ಶ್ರೀ ಜಯನಾರಾಯಣ ರಾವ್



ಬೆಳ್ತಂಗಡಿ ಸಂಘದ ಮಾಜಿ ಉಪಾಧ್ಯಕ್ಷ, ನಿರ್ದೇಶಕ ಶ್ರೀ ಜಯನಾರಾಯಣ ರಾವ್ ಇವರು ತಾ.02.12.2020 ನಿಧನ ಹೊಂದಿದರು.

### ಶ್ರೀಮತಿ ಸರೋಜಿನಿ

ಕೆಲಿಂಜ ಧರ್ಮಸ್ಥಳ ನಿವಾಸಿ ಶ್ರೀಮತಿ ಸರೋಜಿನಿ ಇವರು 24.11.2020 ರಂದು ನಿಧನ ಹೊಂದಿದರು.

### ಮೊರಾಜೆ ಎಸ್.ವಿಠಲ ರಾವ್

ಮೊರಾಜೆ ಎಸ್.ವಿಠಲ ರಾವ್ ಇವರು 29.11.2020 ರಂದು ನಿಧನ ಹೊಂದಿದರು.

## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ "**ಪಾರಾಯಣ**" ಸಂಜೆ ಗಂಟೆ 4-30ರಿಂದ

**ತಾ.02-01-2021 ಸಂಕಷ್ಟಹರ ಚತುರ್ಥಿಯಂದು "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.11-12-2020 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.19-12-2020, ತಾ.03-01-2021 ಮತ್ತು ತಾ.18-01-2021 ಪಂಚಮಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಧನು ಮಾಸದ ವಿಶೇಷ ದಿನಗಳು

| | | | |
|---|---|---|---|
| 15-12-2020 | ಧನು ಸಂಕ್ರಮಣ<br>ಹೇಮಂತ ಋತು, ಮಾರ್ಗಶಿರ ಮಾಸದ ಶುಕ್ಲಪಕ್ಷಾರಂಭ, | 01-01-2021 | ಕ್ರಿಸ್ತಾಬ್ದ, 2021 ಹೊಸ ವರ್ಷದ ಆರಂಭ |
| 16-12-2020 | ಉಡುಪಿ ಚಂದ್ರಮೌಳೀಶ್ವರ ರಥೋತ್ಸವ | 02-01-2021 | ಸಂಕಷ್ಟಹರ ಚತುರ್ಥಿ, ಚಂದ್ರೋದಯ ರಾತ್ರಿ 9.17 |
| 20-12-2020 | ಚಂಪಾಷಷ್ಠೀ, ಸುಬ್ರಹ್ಮಣ್ಯ ಷಷ್ಠೀ | 09-01-2021 | ಉಡುಪಿ ಶ್ರೀಕೃಷ್ಣ ಸಪ್ತೋತ್ಸವ ಆರಂಭ |
| 25-12-2020 | ಸರ್ವೈಕಾದಶಿ, ವೈಕುಂಠ ಏಕಾದಶಿ, ಗೀತಾ ಜಯಂತಿ | 13-01-2021 | ಎಳ್ಳಮಾವಾಸ್ಯೆ, ಸಮುದ್ರಸ್ನಾನ |
| 30-12-2020 | ಹುಣ್ಣಿಮೆ, | 14-01-2021 | ಹೇಮಂತ ಋತು, ಪೌಷ ಮಾಸದ ಶುಕ್ಲಪಕ್ಷಾರಂಭ, ಮಕರಸಂಕ್ರಮಣ, ಉತ್ತರಾಯಣ ಪುಣ್ಯಕಾಲ, ತಿಲಸಂಕ್ರಾತಿ, ಉಡುಪಿ ಬ್ರಹ್ಮರಥೋತ್ಸವ |
| 31-12-2020 | ಹೇಮಂತ ಋತು, ಮಾರ್ಗಶಿರ ಮಾಸದ ಕೃಷ್ಣಪಕ್ಷಾರಂಭ | 15-01-2021 | ಉಡುಪಿ ಚೂರ್ಣೋತ್ಸವ |

## ಶುಭ ಜನನ

ಹಿರಿಯಡ್ಕ ಆಳುಗ್ಗೇಲು ಶ್ರೀ ದೀಪಕ್ ಕೆ.ರಾವ್ ಮತ್ತು ಶ್ರೀಮತಿ ವೃಂದಾ ಕೆ.ರಾವ್ ದಂಪತಿಗಳಿಗೆ ದಿನಾಂಕ 31-10-2020ರಂದು ಹೆಣ್ಣು ಶಿಶುವಿನ ಜನನ

★★★★ ★★★★

ಅಜೆಕಾರು ವಿಶಾಂತ್ ರಾವ್ ಕಾರವಾರ ಹಾಗೂ ಶ್ವೇತಾ ದಂಪತಿಗಳಿಗೆ ದಿನಾಂಕ 30.11.2020 ರಂದು ಹೆಣ್ಣು ಮಗುವಿನ ಜನನ.

## ನಾಮಕರಣ

ಶ್ರೀಮತಿ ಶ್ವೇತ ಮತ್ತು ಶ್ರೀ ಸತೀಶ್ ಭಟ್ ಪಲಿಮಾರ್‌ರವರ ಮಗುವಿನ ಶ್ರೇಯಸ್ ಎಂಬ ಹೆಸರಿನ ನಾಮಕರಣೋತ್ಸವವನ್ನು ಶ್ರೀ ಶಾರದಾ ಕಲ್ಯಾಣ ಮಂಟಪದ ಜ್ಞಾನಮಂದಿರದಲ್ಲಿ ದಿನಾಂಕ 12-11-2020ರಂದು ನೆರವೇರಿಸಲಾಯಿತು.



**ಮೂಡುಬಿದ್ರೆ ಸಂಘದಿಂದ ಶ್ರೀ ಗಣೇಶ್ ರಾವ್ ಅವರಿಗೆ 1,57,000/- ಧನ ಸಹಾಯವನ್ನು ವೈದ್ಯಕೀಯ ನೆರವಿಗಾಗಿ ನೀಡಲಾಯಿತು.**

**ಕವನ** -ಶ್ರೀಮತಿ ರಮಾದೇವಿ ರಾವ್

### ನಿರೀಕ್ಷೆ


ಸೋಲು ಗೆಲುವುಗಳ ಪರೀಕ್ಷೆ ಜೀವನದಲ್ಲಿ
ಸಂತಸದ ಕ್ಷಣಕ್ಕಾಗಿ ನಿರೀಕ್ಷೆ ಜನರಲ್ಲಿ
ಯಶಸ್ಸುಗಳಿಸಬೇಕು ಸತ್ಯದ ದಾರಿಯಲ್ಲಿ
ಕಷ್ಟಪಟ್ಟ ದುಡಿಮೆಗೆ ಜಯವಿದೆ ಶ್ರಮದಲ್ಲಿ.

### ಕಾರ್ಮೋಡ

ಮುಂಜಾನೆ ಹರಡಿದೆ ಇಬ್ಬನಿಯ ಮುಸುಕು
ನಿಶೆಯಲ್ಲಿ ಸೂಸಿದೆ ಶಶಿಯ ಹೊಂಬೆಳಕು
ಕತ್ತಲೆಯ ಕಾರ್ಮೋಡ ನೀನಿಲ್ಲದ ಬದುಕು
ಮೆಚ್ಚಿದವಳು ಜೊತೆಯಾದರೆ ಬಾಳೆಲ್ಲ ಬೆಳಕು.

SAMPATH KUMAR Mobile : 9741508881

TRISHULINI TOURIST
*The Tourist People*
Near Mahishamardhini Temple, Bailur, Udupi.
ALL TYPES OF VEHICLES AVAILABLE FOR HIRE




RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ
ಯಶಸ್ವೀ ಎಂಟರ್‌ಪ್ರೈಸೆಸ್
ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.
ಇ-ಮೇಲ್ : udayarao42@gmail.com
Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams

ಶುಭಾಶಯಗಳೊಂದಿಗೆ
ಹೆಬ್ಬಾರ್ ಎಂಟರ್‌ಪ್ರೈಸಸ್
ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.
ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.
ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

ಶ್ರೀ ಕ್ಷೇತ್ರ ಉದಯಾದ್ರಿ

## ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ, ಪಡುಬಿದ್ರಿ

ಭಕ್ತಾಭಿಮಾನಿಗಳೇ,

ಸ್ವಸ್ತಿ ಶ್ರೀ ಶಾರ್ವರಿ ನಾಮ ಸಂವತ್ಸರದ ಧನುರ್ಮಾಸ ದಿನ 29 ಸಲುವ ಮಾರ್ಗಶೀರ್ಷ ಅಮಾವಾಸ್ಯೆ ದಿನಾಂಕ 13–01–2021 ನೇ ಬುಧವಾರದಂದು

### ಎಳ್ಳಮಾವಾಸ್ಯೆ ಉತ್ಸವವು

ಜರಗಲಿರುವುದು. ಶ್ರೀ ದೇವತಾ ಕಾರ್ಯಕ್ರಮದಲ್ಲಿ ಭಕ್ತಾದಿಗಳಾದ ತಾವೆಲ್ಲರೂ ಭಾಗವಹಿಸಿ, ತನು–ಮನ–ಧನಗಳಿಂದ ಸಹಕರಿಸಿ, ಗಂಧಪ್ರಸಾದವನ್ನು ಸ್ವೀಕರಿಸಿ, ಶ್ರೀ ದೇವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸುತ್ತೇವೆ.

**ಜಗದಾಭಿರಾಮ ಸ್ವಾಮಿ** – ಪ್ರಧಾನ ಅರ್ಚಕರು
**ಪಿ.ರಘುವೀರ ರಾವ್** – ಅಧ್ಯಕ್ಷರು
**ಕರುಣಾಕರ್ ಬೆಳ್ಳೆ** – ಗೌರವ ಅಧ್ಯಕ್ಷರು
**ಶ್ರೀನಿವಾಸ ಶರ್ಮ, ಪಾದೆಬೆಟ್ಟು,** – ಕಾರ್ಯದರ್ಶಿ
**ಪಿ.ಡಿ. ಶೇಖರ ರಾವ್,** – ಖಜಾಂಚಿ

ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ಟೆಂಪಲ್ ಟ್ರಸ್ಟ್ (ರಿ.) ಮತ್ತು ಸರ್ವಸದಸ್ಯರು, ಊರ ಹತ್ತು ಸಮಸ್ತರು

## ಅಖಿಲ ಸ್ಥಾನಿಕ ಬ್ರಾಹ್ಮಣ ಪುರೋಹಿತ–ಅರ್ಚಕ ಪರಿಪಾಲನಸಭಾ, ಮಂಗಳೂರು

(ಬೈಂದೂರು ಶಾಖೆ)

ಆಸ್ತಿಕಬಂಧುಗಳೇ,

ಸ್ವಸ್ತಿ । ಶ್ರೀ ಶಾಲಿವಾಹನಶಕ ವರ್ಷ 1943ನೇ ಶಾರ್ವರಿನಾಮ ಸಂವತ್ಸರದ ದಿನಾಂಕ 25–12–2020, ಶುಕ್ರವಾರದ ಈ ಶುಭ ದಿನ ಶ್ರೀ ಪರಮೇಶ್ವರಾನುಗ್ರಹಪ್ರಾಪ್ತಿಪುರಸ್ಸರವಾಗಿ ಸರ್ವಜನಕ್ಷೇಮಸಂಪಾದನೆಗಾಗಿ ಹೇರಂಜಾಲು ಶ್ರೀ ಗುಡ್ಡೇ ಮಹಾಲಿಂಗೇಶ್ವರ ದೇವರ ಸನ್ನಿಧಿಯಲ್ಲಿ (ಬೈಂದೂರು ತಾಲೂಕು ಸ್ಥಾನಿಕ ಬ್ರಾಹ್ಮಣರ ಸಹಕಾರದೊಂದಿಗೆ)

### ಶ್ರೀ ಶಿವಪಂಚಾಕ್ಷರೀಯಾಗವನ್ನು

ಸಂಪನ್ನಗೊಳಿಸಬೇಕೆಂದು ಸಂಕಲ್ಪಿಸಿದ್ದೇವೆ. ಅದಲ್ಲದೇ ತದಂಗವಾಗಿ ಧಾರ್ಮಿಕಸಭೆಯು ನಡೆಯಲಿದೆ. ಭಕ್ತಜನರಾದ ತಾವು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ, ತನುಮನಧನಗಳಿಂದ ಸಹಕರಿಸಿ, ಶ್ರೀದೇವರ ಕೃಪೆಗೆ ಪಾತ್ರರಾಗಬೇಕಾಗಿ ಬಯಸುತ್ತೇವೆ.

ಗೌರವಾಧ್ಯಕ್ಷರು: ಶ್ರೀ ವೇದಮೂರ್ತಿ ಬ್ರಹ್ಮಶ್ರೀ ಭವಾನೀಶಂಕರ ಉಪಾಧ್ಯಾಯ
ಅಧ್ಯಕ್ಷರು: ಶ್ರೀ ಗುರುಪ್ರಸಾದ್ ಹೆಬ್ಬಾರ್
ಉಪಾಧ್ಯಕ್ಷರು : ಶ್ರೀ ಜಗದಾಭಿರಾಮಸ್ವಾಮಿ
ಕಾರ್ಯದರ್ಶಿಗಳು: ಶ್ರೀ ಚಿದಾನಂದ ಶ್ಯಾನುಭೋಗ್
ಜೊತೆ ಕಾರ್ಯದರ್ಶಿಗಳು: ಶ್ರೀ ಕೃಷ್ಣರಾಜ ಭಟ್
ಕೋಶಾಧಿಕಾರಿಗಳು: ಶ್ರೀ ಪ್ರತಾಪ್ ರಾವ್


Ph : 98459 92859


**Ganesh Hebbar & Associates**

CHARTERED ACCOUNTANT

S.M.S.P. Complex, Udupi - 576 101.



ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ :
ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.






**N. Laxmi Prasad**
ಕಾರ್ಯಕಾರಿಣಿ ಮಂಡಳಿ ಸದಸ್ಯರು
**D. K. District Used Vehicle Dealers & Agents Association (R.), Mangalore**
Flat No. 103, Deepa Residency, Near Preethi Apartment
Kodiyalguttu West, Kodiyalbail, MANGALORE - 575 003
Mob. : 9845644489, 9964236997 E-mail : laxmiprasad5010@gmail.com



**ದೇವಿಕೃಪಾ ಏಜೆನ್ಸೀಸ್, ನಂದಿಕೂರು**



ಫೋನ್ : 2556536 (R), 2555466 (O), Mobile : 9845149521

ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.

ಪ್ರೊ.। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು





ಎಮ್. ದೇವಾನಂದ್ ಭಟ್ Cell : 9845644556

**ಶೋಭಾ ಡಿಜಿಟಲ್**
ಸ್ಟುಡಿಯೋ & ವೀಡಿಯೊ



ಬೆಳ್ವಾಯಿ–574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655


ಶ್ರೀ ತ್ರಿಶೂಲಿನೀ ದುರ್ಗಾಪರಮೇಶ್ವರೀ ಪ್ರಸನ್ನಾ

ಪ್ರಿಯ ಭಕ್ತಾಭಿಮಾನಿಗಳೇ, ಬಳ್ಳ, 21.11.2020

ಸ್ವಸ್ತಿ। ಶ್ರೀ ಶಾಲಿವಾಹನ ಶಕವರ್ಷ 1942ನೇ ಶಾರ್ವರಿ ನಾಮ ಸಂವತ್ಸರದ ಮಾರ್ಗಶಿರ ಕೃಷ್ಣ ಅಷ್ಟಮಿ ದಿನಾಂಕ 06.01.2021 ಬುಧವಾರ

### ಶ್ರೀ ದುರ್ಗಾಪರಮೇಶ್ವರೀ ಅಮ್ಮನವರ ವಾರ್ಷಿಕೋತ್ಸವ

ಸ್ವಸ್ತಿ। ಶ್ರೀ ಶಾಲಿವಾಹನ ಶಕವರ್ಷ 1942ನೇ ಶಾರ್ವರಿ ನಾಮ ಸಂವತ್ಸರದ ಮಾರ್ಗಶಿರ ಕೃಷ್ಣ ದಶಮಿ ದಿನಾಂಕ 08.01.2021 ಶುಕ್ರವಾರದಿಂದ ದ್ವಾದಶಿ 10.01.2021 ಆದಿತ್ಯವಾರ ಪರ್ಯಂತ

### ಶ್ರೀ ತ್ರಿಶೂಲಿನಿ ದುರ್ಗಾಪರಮೇಶ್ವರೀ ಅಮ್ಮನವರ ಬ್ರಹ್ಮರಥೋತ್ಸವ

ಕಾರ್ಯಕ್ರಮಗಳು ಶ್ರೀ ಗುರುದೇವತಾನುಗ್ರಹದಿಂದ ಕ್ಷೇತ್ರ ತಂತ್ರಿಗಳಾದ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ಜರಗಲಿರುವುದು. ತಾವೆಲ್ಲರೂ ಈ ಉತ್ಸವಗಳಲ್ಲಿ ಭಾಗವಹಿಸಿ, ಶ್ರೀ ದೇವರ ಪ್ರಸಾದ ಸ್ವೀಕರಿಸಿ, ಅಮ್ಮನವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸುವ

**ಯಂ. ಶ್ರೀವತ್ಸ**
ಅನುವಂಶಿಕ ಆಡಳಿತ ಮೊಕ್ತೇಸರರು ಮತ್ತು ಪ್ರಧಾನ ಅರ್ಚಕರು

**ಡಾ.ಮಂಜುನಾಥ ಎಂ.ವಿ.**
ಪವಿತ್ರಪಾಣಿ/ಮೊಕ್ತೇಸರರು ಮತ್ತು ಆಡಳಿತ ಮಂಡಳಿ

ಇದೀಗ ದೇಗುಲದ ರಾಜಾಂಗಣಕ್ಕೆ ಮೇಲ್ಛಾವಣಿಯನ್ನು ನಿರ್ಮಿಸುವ ಯೋಜನೆಯನ್ನು ರೂಪಿಸಿದ್ದೇವೆ. ಭಕ್ತಾಧಿಗಳಿಂದ ಸಹಕಾರವನ್ನು ನಿರೀಕ್ಷಿಸುತ್ತೇವೆ.

## ಶ್ರೀ ಶಾರದಾ ಕ್ರೆಡಿಟ್ ಕೋ–ಅಪರೇಟಿವ್ ಸೊಸೈಟಿ (ನಿ.)

ನಂಬ್ರ 31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ – 576 101. ಫೋನ್ : 2522408

**ಕ್ಲಾರ್ಕ್ (ಗುಮಾಸ್ತ) ಹುದ್ದೆಗಾಗಿ ನಮ್ಮ ಸಮಾಜದ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.**

**ಕನಿಷ್ಠ ಅರ್ಹತೆ :**

1) ಭಾರತದಲ್ಲಿ ಕಾನೂನಿನಿಂದ ಸ್ಥಾಪಿತವಾದ ಯಾವುದೇ ವಿಶ್ವವಿದ್ಯಾಲಯದಿಂದ ಯಾವುದೇ ಪದವಿಯಲ್ಲಿ ತೇರ್ಗಡೆಯಾಗಿರಬೇಕು.
2) ಗಣಕಯಂತ್ರ ಕಾರ್ಯಾಚರಣೆಗಳು ಮತ್ತು ಅನ್ವಯಿಸುವಿಕೆಗಳ (ಕಂಪ್ಯೂಟರ್ ಆಪರೇಷನ್ಸ್ ಆಂಡ್ ಅಪ್ಲಿಕೇಷನ್ಸ್) ಜ್ಞಾನವಿರಬೇಕು.
3) ಓದಲು, ಬರೆಯಲು, ಅರ್ಥಮಾಡಿಕೊಳ್ಳಲು ಮತ್ತು ಸರಾಗವಾಗಿ ಮಾತನಾಡುವುದಕ್ಕೆ ಸಾಮರ್ಥ್ಯವಿರುವಷ್ಟು ಕನ್ನಡ ಜ್ಞಾನವಿರಬೇಕು.
4) ಅಭ್ಯರ್ಥಿಯು 35 ವರ್ಷಗಳ ವಯಸ್ಸನ್ನು ಮೀರಿರಬಾರದು.

**ಎಲ್ಲಾ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 15/01/2021**

–ಕಾರ್ಯದರ್ಶಿ


*With Best Complimemts From*

**SRI M. SHAILESH RAO** Ph : 9448624324
B.E., Civil
**Civil Engineer & Contractor**
**SRI MALAVIKA ASSOCIATES**
KALSANKA-UDUPI ROAD, UDUPI.
**Website : shreemaalavikaassociates.com**



**Buying and selling shares as easy as checking your emails**

**Sharekhan Online Trading Account Features:**
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)






ದಾನಿಗಳ ಫೋಟೋ ಅನಾವರಣ









# ಶ್ರೀ ಸುಬ್ರಹ್ಮಣ್ಯ ಸಭಾ (ರಿ) "ವಾರ್ಷಿಕ ಮಹಾಸಭೆ"



ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ವಾರ್ಷಿಕ ಮಹಾಸಭೆಯು ತಾ.29.11.2020 ರವಿವಾರ ಸದನದಲ್ಲಿ ನಡೆಯಿತು. ದಾನಿಗಳು ಕೊಡುಗೆಯಾಗಿ ನೀಡಿದ ದೊಡ್ಡ ಕಾಲು ದೀಪವನ್ನು ಬೆಳಗಿಸಿ ಶ್ರೀ ಶಾರದಾಂಬಾ ಭಜನಾ ಮಂಡಳಿಯುವರು ಭಜನಾ ಕಾರ್ಯಕ್ರಮವನ್ನು ನಡೆಸಿಕೊಟ್ಟರು. "ಮಹಾಸಭೆ"ಯು ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ ಯವರ ಪ್ರಸ್ತಾವನೆಯೊಂದಿಗೆ ಆರಂಭಿಸಲಾಯಿತು. ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ 2019-20ರ ಆಡಳಿತ ಮಂಡಳಿ ವರದಿಯನ್ನು ಮಂಡಿಸಿದರೆ, ಶ್ರೀ ಸಭಾದ ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ 2019-20ರ ಪರಿಶೋಧಿತ ಲೆಕ್ಕಪತ್ರವನ್ನು ಮಂಡಿಸಿ ಅನುಮೋದನೆ ಪಡೆದುಕೊಂಡರು. ಸದಸ್ಯರಿಂದ ಬಂದ ಸಲಹೆ, ಸೂಚನೆಗಳನ್ನು ಪರಿಶೀಲಿಸಲು ನಿರ್ಧರಿಸಲಾಯಿತು. ಉಪಾಧ್ಯಕ್ಷರಾದ ಡಾ. ಎ.ಪಿ. ಕೃಷ್ಣ ಧನ್ಯವಾದ ನೀಡಿದರು. ಬಳಿಕ ಶ್ರೀ ಸಭಾದಲ್ಲಿ ವಿದ್ಯಾ ನಿಧಿಯನ್ನು ಸ್ಥಾಪಿಸಿದ 7 ದಾನಿಗಳಾದ ಕೆ. ಸದಾಶಿವ ಶರ್ಮ, ಬ್ರಹ್ಮಶ್ರೀ ಡಾ. ನಂದಿಕೂರು ಹರಿಶ್ಚಂದ್ರ ಉಪಾದ್ಯಾಯ ಮತ್ತು ಶ್ರೀಮತಿ ಪ್ರಸನ್ನ ಕುಮಾರಿ ಉಪಾದ್ಯಾಯ , ನಂದಿಕೂರು ಸದಾಶಿವ ರಾವ್, ನಂದಿಕೂರು ಮೋಹನ್ ರಾವ್, ಬೊಂಡಂತಿಲ ನರಸಪ್ಪಯ್ಯ ಮತ್ತು ಶ್ರೀಮತಿ ಪಾರ್ವತಿಯಮ್ಮ , ಶ್ರೀಮತಿ ಇನ್ನ ನಾಗಮ್ಮ ನಾರಾಯಣ ರಾವ್, ಇನ್ನಾ ಅಪ್ಪಾಜಿ ರಾವ್ ಮತ್ತು ಇನ್ನಾ ರಾಜಮ್ಮರವರ ಭಾವಚಿತ್ರಗಳನ್ನು ಅವರ ಕುಟುಂಬಸ್ಥರು ಆರತಿ ಬೆಳಗಿ, ಪುಷ್ಪಾರ್ಚನೆ ನಡೆಸಿ ಅನಾವರಣ ಗೊಳಿಸಿದರು.

ಕೊರೋನಾ ಪ್ರಯುಕ್ತ ತಮ್ಮ ಮನೆಯ ದೀಪಾವಳಿ ಸಂಭ್ರಮದ ಫೋಟೊಗಳ ಸ್ಪರ್ಧೆಯನ್ನು ಶ್ರೀ ಸಭಾದ ಮಹಿಳಾ ವೇದಿಕೆಯವರು ನಡೆಸಿದ್ದು ಸುಮಾರು 19 ಜನರಿಗೆ ವಿವಿಧ ವಿಭಾಗಗಳಲ್ಲಿ ಬಹುಮಾನವನ್ನು ನೀಡಲಾಯಿತು. ಮಹಿಳಾ ವೇದಿಕೆಯ ಅಧ್ಯಕ್ಷೆ ಶ್ರೀಮತಿ ಕುಸುಮಾ ನವೀನ್ ಕುಮಾರ್, ಉಪಾಧ್ಯಕ್ಷೆ ಡಾ| ಜಯಲಕ್ಷ್ಮೀ, ಕಾರ್ಯದರ್ಶಿ ಶ್ರೀಮತಿ ಪುಷ್ಪಾವತಿ ಶ್ರೀನಿವಾಸ್ ಮತ್ತು ಶ್ರೀ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ ಉಪಸ್ಥಿತರಿದ್ದರು. ಶ್ರೀಮತಿ ಸ್ನೇಹಲತಾ ದಿವಾಕರ ಕಾರ್ಯಕ್ರಮ ನಿರೂಪಿಸಿದರು. ಪ್ರತಿಭಾ ಪುರಸ್ಕಾರ ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

## ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ "ಗೃಹ ಸಾಲ" ಸಂಘದ ಪ್ರಾಥಮಿಕ ಸದಸ್ಯರಿಗೆ 11.50% (ಷರತ್ತುಗಳು ಅನ್ವಯ)

| | | |
|---|---|---|
| ಗೃಹ ಸಾಲ | : | 10% |
| ವಾಹನ ಸಾಲ | : | 12.5% |
| ಹಳೆಯ ವಾಹನ | : | 14% |
| ಆಭರಣ ಸಾಲ | : | 11.5% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 11% |

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 8.5% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011-12ರಿಂದ 2016-17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ (☎ 2522408) ಕುಕ್ಕಿಕಟ್ಟೆ ಶಾಖೆ (☎ 2592133) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)


With Best Compliments From :

## ***Rajathadri Hotel Pvt. Ltd.

Lodging & Boarding

Sri Ramesh Shanubhag, Usha, Sanketh and Kavitha

Directors



OUR FACILITIES

★ A/c Rooms ★ Deluxe Rooms ★ 3, 4, 5 Cot Rooms

★ Room Service ★ T.V. with Cable Connection ★ Hot Water

SHIVAJI CIRCLE, POWAI NAKA, SATARA-415001

Ph : 02162-234017, 233818

Fax : 02162-233885 E-mail : rajathadri.satara@gmail.com

## ಬಾರ್ಕೂರು ಸಂಘದಿಂದ ಶೃಂಗೇರಿ ಭೇಟಿ ಕಾರ್ಯಕ್ರಮ





ಶ್ರೀ ಜ್ಞಾನಶಕ್ತಿ ಸ್ಥಾನಿಕ ಬ್ರಾಹ್ಮಣ ಸಭಾ ಬಾರ್ಕೂರು–ಮಂದಾರ್ತಿ ಇದರ ಅಧ್ಯಕ್ಷರು ಮತ್ತು ಸದಸ್ಯರು ಇತ್ತೀಚಿಗೆ ಸಂಘದ ವತಿಯಿಂದ ಶೃಂಗೇರಿ ಶ್ರೀ ದೇವರ ಮತ್ತು ಜಗದ್ಗುರುಗಳ ದರ್ಶನ ಮಾಡಿ ಭಿಕ್ಷಾವಂದನೆ, ಪಾದಪೂಜೆ ನೆರವೇರಿಸಿ ಜಗದ್ಗುರುಗಳ ಆಶೀರ್ವಾದ ಪಡೆದರು. ಈ ಕಾರ್ಯಕ್ರಮದಲ್ಲಿ ನಲವತ್ತಕ್ಕೂ ಹೆಚ್ಚು ಸದಸ್ಯರು ಭಾಗವಹಿಸಿದ್ದರು. ಮಹಿಳಾ ವಿಭಾಗದ ಭಜನಾ ತಂಡದ ಸದಸ್ಯರು ಭಜನೆ ಹಾಡಿ ಪುಳಕಿತರಾದರು. ಹಿರಿಯ ಮತ್ತು ಕಿರಿಯ ಶ್ರೀಗಳು ಸಂತೋಷದಿಂದ ಈ ಸಂಸ್ಥೆಯ ಬಗ್ಗೆ ವಿಚಾರಿಸಿ ಶುಭಾಶಂಸನೆಗೈದರು. ವರ್ಷಂಪ್ರತಿ ಶ್ರೀ ಕ್ಷೇತ್ರ ದರ್ಶನ ಕಾರ್ಯಕ್ರಮ ಹಮ್ಮಿಕೊಳ್ಳುವಂತೆ ಗುರುಗಳು ಸೂಚಿಸಿದರು. ಈ ಗುರುವಂದನಾ ಕಾರ್ಯಕ್ರಮದಲ್ಲಿ ಶೃಂಗೇರಿ ಶ್ರೀ ಶಾರದಾ ಪೀಠದ ಉಡುಪಿ ಪ್ರಾಂತೀಯ ಧರ್ಮದರ್ಶಿಗಳಾದ ಶ್ರೀ ವಾಗೀಶ ಶಾಸ್ತ್ರಿಗಳು ಭಾಗವಹಿಸಿ ಮಾರ್ಗದರ್ಶನಗೈದರು.



## ಕುಂದಾಪುರ ಸಂಘದ ಅಧ್ಯಕ್ಷರಾಗಿ ಶ್ರೀ ಸತ್ಯನಾರಾಯಣ ಹೆಬ್ಬಾರ್

ತಾರೀಕು 08.11.2020 ರಂದು ಕುಂದಾಪುರ ತಾಲೂಕು ಬ್ರಾಹ್ಮಣ ಸಂಘ ಇದರ ಸಭೆಯು ನೆರವೇರಿತು. ಮುಂದಿನ 3 ವರ್ಷ ಅವಧಿಗೆ ಅಧ್ಯಕ್ಷರಾಗಿ ಶ್ರೀ ಸತ್ಯನಾರಾಯಣ ಹೆಬ್ಬಾರ್ ಮರೂರು ಇವರು ಆಯ್ಕೆಯಾದರು. ಶ್ರೀ ಸುಭಾಷ್‌ಚಂದ್ರ ಬಳ್ಕೂರು ಇವರು ಕಾರ್ಯದರ್ಶಿಯಾಗಿ ಶ್ರೀ ಅರುಣ್ ಶಾನುಭಾಗ್ ಕಿರಿಮಂಜೇಶ್ವರ ಇವರು ಕೋಶಾಧಿಕಾರಿಯಾಗಿಯೂ ಆಯ್ಕೆಯಾಗಿದ್ದಾರೆ.

## ಕುಮಾರಿ ನೇಹಾ ರಾವ್‌ಗೆ ಸ್ನಾತಕೋತ್ತರ ಪದವಿ



ಆಸ್ಟ್ರೇಲಿಯಾದ ಆರ್‌ಎಂಐಟಿ ವಿಶ್ವವಿದ್ಯಾನಿಲಯದಲ್ಲಿ "ಎಂ.ಎಸ್.ಇನ್ ಡೇಟಾ ಅನಾಲಿಟಿಕ್ಸ್" ಸ್ನಾತಕೋತ್ತರ ಪದವಿಯನ್ನು ಓದುತ್ತಿರುವ ಕುಮಾರಿ ನೇಹಾರಾವ್ 2020ನೇ ನವೆಂಬರ್ ತಿಂಗಳಲ್ಲಿ ನಡೆದ ಅಂತಿಮ ಪರೀಕ್ಷೆಯಲ್ಲಿ ವಿಶ್ವವಿದ್ಯಾನಿಲಯದ ಸುಮಾರು 7000ಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳಲ್ಲಿ 15ನೇ ರ್‍ಯಾಂಕ್‌ನೊಂದಿಗೆ, ಎಲ್ಲಾ ವಿಷಯಗಳಲ್ಲಿ 90ಕ್ಕಿಂತಲೂ ಹೆಚ್ಚಿನ (ಡಿಸ್ಟಿಂಕ್ಷನ್) ಅಂಕಗಳೊಂದಿಗೆ ಸ್ನಾತಕೋತ್ತರ ಪದವಿಯನ್ನು ಗಳಿಸಿರುತ್ತಾರೆ.

ಕುಮಾರಿ ನೇಹಾ ರಾವ್ ಮಹಾರಾಷ್ಟ್ರದ ನಾಸಿಕ್‌ನಲ್ಲಿ ವಾಸ್ತವ್ಯದಲ್ಲಿರುವ ಉಡುಪಿ ಚಿಟ್ಪಾಡಿ ಶ್ರೀ ನಾರಾಯಣ ಬಿ. ರಾವ್ ಹಾಗೂ ಶ್ರೀಮತಿ ವಿದ್ಯಾ ಎನ್. ರಾವ್ ದಂಪತಿಗಳ ಪುತ್ರಿ ಹಾಗೂ ದಿ| ಚಿಟ್ಪಾಡಿ ಭುಜಂಗರಾಯರ ಪೌತ್ರಿ. ಕು| ನೇಹಾರ ಸಾಧನೆಗೆ ಶ್ರೀ ಶಾರದಾ ಅಭಿನಂದನೆಗಳು.



ಬೆಳ್ತಂಗಡಿ ಸಂಘದಿಂದ ದೀಪಾವಳಿ ಆಚರಣೆ

## ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸ್ಯಾಟಿ (ನಿ.) ಉಡುಪಿ ವಾರ್ಷಿಕ ಮಹಾಸಭೆ



ಶ್ರೀ ಶಾರದಾ ಕ್ರೆಡಿಟ್ ಕೋ–ಆಪರೇಟಿವ್ ಸೊಸ್ಯಾಟಿ (ನಿ.) ಉಡುಪಿ ಇದರ 2019–2020ನೇ ಸಾಲಿನ ವಾರ್ಷಿಕ ಮಹಾಸಭೆಯು ತಾ.06.12.2020 ನೇ ರವಿವಾರ ಬೆಳಿಗ್ಗೆ ಭೂವರಾಹ ಸಂಕೀರ್ಣದ ಸಭಾಂಗಣದಲ್ಲಿ ನಡೆಯಿತು. ಸಂಘದ ಅಧ್ಯಕ್ಷರಾದ ಶ್ರೀ ಕೆ.ವೇಣುಗೋಪಾಲ್‌ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆ ಶ್ರೀಮತಿ ಭಾರತಿಯವರ ಪ್ರಾರ್ಥನೆಯೊಂದಿಗೆ ಆರಂಭವಾಯಿತು. ಸದಸ್ಯರನ್ನು ಆತ್ಮೀಯವಾಗಿ ಸ್ವಾಗತಿಸುತ್ತಾ ಅಧ್ಯಕ್ಷರು "ಸತತವಾಗಿ 17ನೇ ವರ್ಷದಲ್ಲಿ ಲಾಭಗಳಿಸುತ್ತಾ ಬಂದಿರುವ ಸಂಸ್ಥೆ, 19 ವರುಷಗಳ ಸಾರ್ಥಕ ವ್ಯವಹಾರವನ್ನು ಪೂರ್ಣಗೊಳಿಸಿ 20 ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದೆ. ಸಂಘವು ವರದಿ ಸಾಲಿನಲ್ಲಿ ಸದಸ್ಯರಿಂದ 25.93 ಲಕ್ಷ ಪಾಲು ಬಂಡವಾಳ ಹಾಗೂ 19.63 ಕೋಟಿ ಠೇವಣಿ ಸಂಗ್ರಹಿಸಿದೆ. 16.26 ಕೋಟಿ ಸಾಲ ನೀಡಿದ್ದು ರೂ.26.23 ಲಕ್ಷ ನಿವ್ವಳ ಲಾಭಗಳಿಸಿದೆ. ಪ್ರಸಕ್ತ ಸಂಘವು 20.91 ಕೋಟಿ ದುಡಿಯುವ ಬಂಡವಾಳ ಹೊಂದಿದ್ದು, ಸಂಘದ ಸದಸ್ಯರಿಗೆ ಶೇ.10% ಡಿವಿಡೆಂಡ್ ಘೋಷಿಸುತ್ತಿದ್ದೇವೆ. ನಮ್ಮ ಎಲ್ಲಾ ಠೇವಣಿದಾರರ ತುಂಬು ಹೃದಯದ ಬೆಂಬಲ ಹಾಗೂ ಸಹಕಾರವನ್ನು ಮುಂದೆಯೂ ಕೋರುತ್ತೇವೆ. ಈ ಸಂಘವು ನಡೆದು ಬಂದ ಹಾದಿಯಲ್ಲಿ ಮೈಗೂಡಿಸಿಕೊಂಡ ಸಹಕಾರಿ ಮೌಲ್ಯಗಳನ್ನು ಮುಂದುವರಿಸಿಕೊಂಡು ಹೋಗುತ್ತಾ, ಹಸನ್ಮುಖದ ಸೇವೆ ಸತತ ಎಲ್ಲರಿಗೂ ದೊರೆಯಲಿದೆ ಎಂಬ ಭರವಸೆಯೊಂದಿಗೆ ನಿಮ್ಮೆಲ್ಲರನ್ನು ವಂದಿಸುತ್ತೇವೆ. ಪದಾಧಿಕಾರಿಗಳು ಬರಬಹುದು–ನಿರ್ಗಮಿಸಬಹುದು. ಆದರೆ ಈ ಸಂಸ್ಥೆಯು ನಿರಂತರವಾಗಿ ಮುನ್ನಡೆಯಬೇಕು ಸಂಸ್ಥೆಯನ್ನು ಇನ್ನೂ ಎತ್ತರಕ್ಕೆ ಕೊಂಡೊಯ್ಯಲು ನೀವು ಸಹಕರಿಸಬೇಕು" ಎಂದರು. 2019–20ನೇ ಸಾಲಿನ ವಾರ್ಷಿಕ ವರದಿ ಸಭೆಯಲ್ಲಿ ಅಂಗೀಕರಿಸಲ್ಪಟ್ಟ ನಂತರ, 2019–2020ನೇ ಸಾಲಿನ ಪರಿಶೋಧಿತ ಲೆಕ್ಕ ಪತ್ರಗಳನ್ನು, 2020–21ನೇ ಸಾಲಿನ ಅಂದಾಜು ಅಯವ್ಯಯ ಪಟ್ಟಿಯನ್ನು, ಲೆಕ್ಕ ಪರಿಶೋಧಿತರ ನ್ಯೂನತೆಗಳಿಗೆ ಅನುಪಾಲನಾ ವರದಿಯನ್ನು ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಯಿತು. ನಂತರ 2020–21ನೇ ಸಾಲಿಗೆ ಲೆಕ್ಕ ಪರಿಶೋಧಕರನ್ನಾಗಿ ಕೆ.ರಮೇಶ್ ರಾವ್, ಸನ್ನದು ಲೆಕ್ಕ ಪರಿಶೋಧಕರು, ಕಾರ್ಕಳ ಇವರನ್ನು ನೇಮಕ ಮಾಡಿಕೊಳ್ಳುವ ಪ್ರಸ್ತಾಪವನ್ನು ಕಾರ್ಯದರ್ಶಿ ಎನ್.ಪಟ್ಟಾಭಿರಾಮ ರಾವ್‌ರವರು ಸಭೆಯ ಮುಂದಿಟ್ಟರು. ಮಹಾಸಭೆಯು ಸರ್ವಾನುಮತದಿಂದ ಅಂಗೀಕರಿಸಿತು. ವೇದಿಕೆಯಲ್ಲಿ ಉಪಾಧ್ಯಕ್ಷರಾದ ಯು.ಅರವಿಂದ ಕುಮಾರ್ ಹಾಗೂ ನಿರ್ದೇಶಕರಾದ ಎಂ.ಸದಾನಂದ ರಾವ್, ಯು.ಪ್ರಫುಲ್ಲಚಂದ್ರ ರಾವ್, ವೈ.ಪ್ರಕಾಶ್ ಕುಮಾರ್, ವೈ.ಮೋಹನ ರಾವ್, ಕೆ.ಮಂಜುನಾಥ್ ಹೆಬ್ಬಾರ್, ಬಿ.ಜಯರಾಮ ರಾವ್, ಕೃಷ್ಣಕುಮಾರ್ ರಾವ್ ಮಟ್ಟು, ಕೆ.ಗಣೇಶ್ ರಾವ್, ವೈ.ಮುರಳೀಕೃಷ್ಣ ರಾವ್, ಪಿ.ಪ್ರಭಾಕರ ಭಂಡಿ, ಹರಿಣಾಕ್ಷಿ ಎನ್.ರಾವ್. ಉಪಸ್ಥಿತರಿದ್ದರು.

ಶಾಖಾ ವ್ಯವಸ್ಥಾಪಕಿ ಸೌಮ್ಯಲತಾ ರವರ ಧನ್ಯವಾದ ಸಮರ್ಪಣೆಯೊಂದಿಗೆ ಸಭೆಯು ಮಕ್ತಾಯವಾಯಿತು. ಕೊನೆಯಲ್ಲಿ ಸದಸ್ಯರೆಲ್ಲರೂ ಮಧ್ಯಾಹ್ನದ ಭೋಜನವನ್ನು ಸ್ವೀಕರಿಸಿದರು.

## ಡಾ| ಸ್ವರ್ಣಲತಾ ಇವರಿಗೆ ಸನ್ಮಾನ



ಉಡುಪಿಯ ಸರಕಾರಿ ಹೆರಿಗೆ ಆಸ್ಪತ್ರೆಯಲ್ಲಿ ಕಳೆದ 2 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಡಾ| ಸ್ವರ್ಣಲತಾ ಇವರು ಅತ್ಯಧಿಕ ಹೆರಿಗೆಗಳನ್ನು ನೆರವೇರಿಸಿದಕ್ಕಾಗಿ ಜಿಲ್ಲಾಡಳಿತದ ವತಿಯಿಂದ ಸನ್ಮಾನಿಸಲಾಯಿತು.






Owned, Published & Edited by : Sri Y. Muralikrishna Rao onbehalf of Sri Sthanika Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org